ಅಡುಗೆ ಅನಿಲ ಕೊರತೆ ವದಂತಿ, ಸಾರ್ವಜನಿಕರಿಗೆ ಆತಂಕ ಬೇಡ: ಜಿಲ್ಲಾಧಿಕಾರಿ ಸ್ಪಷ್ಟನೆ

ಉದಯಕಾಲ ನ್ಯೂಸ್

ವಿಜಯನಗರ (ಹೊಸಪೇಟೆ): ಇತ್ತೀಚಿನ ಜಿಲ್ಲೆಯಲ್ಲಿ ಗೃಹ ಬಳಕೆ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂಬ ಸುಳ್ಳು ವದಂತಿಗಳು ಹಬ್ಬಿದೆ. ಜಿಲ್ಲೆಯಲ್ಲಿ ಯಾವುದೇ ರೀತಿಯ ಅನಿಲ ಕೊರತೆಯಾಗದೇ ಎಂದಿನಂತೆ ಪೂರೈಕೆಯಾಗಲಿದೆ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಜಿಲಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಸ್ಪಷ್ಟಪಡಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗುರುವಾರ ಅಡುಗೆ ಅನಿಲ ಪೂರೈಕೆಗೆ ಸಂಬಂಧಿಸಿದಂತೆ ಆಯೋಜಿಸಲಾದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಾಶ್ಚಿಮಾತ್ಯ ದೇಶಗಳಲ್ಲಿ ಯುದ್ಧದ ಸನ್ನಿವೇಶವನ್ನು ಮುಂದಿಟ್ಟುಕೊಂಡು ಅನಿಲದ ಕೊರತೆಯಾಗಲಿದೆ ಎಂಬ ವದಂತಿಗಳಿಗೆ ಕಿವಿಗೊಡಬಾರದು.

ಜಿಲ್ಲೆಯಲ್ಲಿ ಯಾವುದೇ ರೀತಿಯ ಅನಿಲ ಕೊರತೆ ಉಂಟಾಗಿಲ್ಲ, ಸರ್ಕಾರದ ನಿಯಮಾನುಸಾರ ಅನಿಲ ವಿತರಕ ಸಂಸ್ಥೆಗಳ ಮೂಲಕ ಪೂರೈಕೆಯು ಎಂದಿನಂತೆ ಸುಗಮವಾಗಿ ನಡೆಯಲಿದೆ. ಒಂದು ವೇಳೆ ಜಿಲ್ಲೆಯಲ್ಲಿ ಯಾರಾದರೂ ಅಕ್ರಮವಾಗಿ ಸಿಲಿಂಡರ್‌ಗಳನ್ನು ಸಂಗ್ರಹಿಸಿರುವುದು ಕಂಡುಬಂದಲ್ಲಿ, ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅನಿಲ ಪೂರೈಕೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳಿದ್ದಲ್ಲಿ ತಕ್ಷಣವೇ ಆಯಾ ಅನಿಲ ವಿತರಕ ಸಂಸ್ಥೆಗಳನ್ನು ಸಂಪರ್ಕಿಸಬೇಕು.

ಯಾವುದೇ ಕಾರಣಕ್ಕೂ ಮಧ್ಯವರ್ತಿಗಳ ಮೊರೆ ಹೋಗಬಾರದು ಎಂದು ತಿಳಿಸಿದರು.

ಈ ವೇಳೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಉಪನಿರ್ದೇಶಕ ರಿಯಾಜ್, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಅನಿಲ ಪೂರೈಕೆ ಉದ್ಯಮದ ಮುಖ್ಯಸ್ಥರು ಉಪಸ್ಥಿತರಿದ್ದರು.

ಚುಟುಕು ಸುದ್ದಿ

ಕುಡಿವ ನೀರು, ಸಾರ್ವಜನಿಕ ಕುಂದುಕೊರತೆ ನಿವಾರಣೆಗೆ ಕಂಟ್ರೋಲ್ ರೂಂ ಆರಂಭ



ಬಳ್ಳಾರಿ: ಜಿಲ್ಲೆಯಲ್ಲಿ ಸಾರ್ವಜನಿಕರ ಕುಡಿಯುವ ನೀರಿನ ಸಮಸ್ಯೆಗಳು ಹಾಗೂ ಇತರೆ ನಾಗರಿಕ ಕುಂದುಕೊರತೆಗಳನ್ನು ತ್ವರಿತವಾಗಿ ಆಲಿಸಿ, ಪರಿಹರಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿಶೇಷ 'ಕಂಟ್ರೋಲ್ ರೂಂ' (ನಿಯಂತ್ರಣ ಕೊಠಡಿ) ಅನ್ನು ತೆರೆಯಲಾಗಿದೆ. ಜಿಲ್ಲಾಡಳಿತವು ಸಾರ್ವಜನಿಕರ ದೂರುಗಳನ್ನು ಸ್ವೀಕರಿಸಿ, ಅವುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ತಕ್ಷಣವೇ ರವಾನಿಸಿ ಶೀಘ್ರ ಪರಿಹಾರ ಒದಗಿಸುವ ಉದ್ದೇಶದಿಂದ ಈ ಕ್ರಮ ಕೈಗೊಂಡಿದೆ.

ಸಂಪರ್ಕಿಸಬೇಕಾದ ಸಂಖ್ಯೆ: ದೂರವಾಣಿ ಸಂಖ್ಯೆ (ಟೋಲ್ ಫ್ರೀ ಸಂಖ್ಯೆ)–1077, ಲ್ಯಾಂಡ್ ಲೈನ್ ಸಂಖ್ಯೆ–08392–277100, ವಾಟ್ಸಾಪ್ ಸಂಖ್ಯೆ–8277888866 ಜಿಲ್ಲೆಯ ನಾಗರಿಕರು ತಮ್ಮ ಭಾಗದ ಕುಡಿಯುವ ನೀರಿನ ಸಮಸ್ಯೆ ಅಥವಾ ಇತರೆ ಯಾವುದೇ ಸಾರ್ವಜನಿಕ ದೂರುಗಳಿದ್ದಲ್ಲಿ ಈ ಮೇಲ್ಕಂಡ ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಿ ತಮ್ಮ ದೂರು-ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಾರಿ ಹರಿದು ಅಜ್ಜ, ಮೊಮ್ಮಗಳು ಸ್ಥಳದಲ್ಲೇ ಮೃತ



ಕೂಡ್ಲಿಗಿ: ತಾಲ್ಲೂಕಿನ ಕ್ಯಾಸನಕೆರೆ ಬಳಿ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಗುರುವಾರ ಮಧ್ಯಾಹ್ನ ಲಾರಿ ಹರಿದು ಅಜ್ಜ ಮೊಮ್ಮಗಳು ಮೃತಪಟ್ಟ ಘಟನೆ ಸಂಭವಿಸಿದೆ.

ತಾಲ್ಲೂಕಿನ ಕೆಳಗಿನ ಕರ್ನಾರಹಟ್ಟಿ ಗ್ರಾಮದ ಈಶ್ವರಪ್ಪ(55) ಹಾಗೂ ಮೊಮ್ಮಗಳು ಸೃಷ್ಟಿ(14) ಮೃತಪಟ್ಟ ದುರ್ದೈವಿಗಳು. ಮೊಮ್ಮಗಳು ಸೃಷ್ಟಿ ಕೂಡ್ಲಿಗಿ ಪಟ್ಟಣದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದಳು. ಗುರುವಾರ ವಾರ್ಷಿಕ ಪರೀಕ್ಷೆ ಮುಗಿದ ಕಾರಣ ಈಶ್ವರಪ್ಪ ಅವರು ಸೃಷ್ಟಿಯನ್ನು ಬೈಕ್‌ನಲ್ಲಿ ಕರೆದುಕೊಂಡು ತಮ್ಮ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಕ್ಯಾಸನಕೆರೆ ಬಳಿ ಹೆದ್ದಾರಿ ರಸ್ತೆಯಲ್ಲಿ ಒಣಹಾಕಿದ್ದ ರಾಗಿ ಮೇಲೆ ಬೈಕ್ ನಿಯಂತ್ರಣ ತಪ್ಪಿ ಬಿದ್ದಾಗ, ಹಿಂದಿನಿಂದ ಬಂದ ಲಾರಿ ಇಬ್ಬರ ಮೇಲೆ ಹರಿದಿದೆ. ಇದರಿಂದ ತೀವ್ರವಾಗಿ ಗಾಯಗೊಂಡ ಅಜ್ಜ ಮೊಮ್ಮಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತವಾದ ಸ್ಥಳಕ್ಕೆ ವಿಜಯನಗರ ಎಸ್ಪಿ ಎಸ್.ಜಾಹ್ನವಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಯುರ್ವೇದ ಪದ್ಧತಿಯಿಂದ ಮನುಷ್ಯ ರೋಗಮುಕ್ತ: ಡಾ. ಪ್ರಭುದೇವ



ಉದಯಕಾಲ ನ್ಯೂಸ್

ಹರಪನಹಳ್ಳಿ: ಆಯುರ್ವೇದ ಪದ್ಧತಿಯಿಂದ ಮಾತ್ರ ಮನುಷ್ಯ ರೋಗಮುಕ್ತನಾಗಲು ಸಾಧ್ಯ ಎಂದು ಆಯುರ್ವೇದ ತಜ್ಞ ಡಾ.ಪ್ರಭುದೇವ ಹೇಳಿದರು.

ನಗರದ ಕೇಂಪೇಶ್ವರ ದೇವಸ್ಥಾನ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆಯುಷ್ ಇಲಾಖೆ, ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹರಪನ ಹಳ್ಳಿ ಆಶ್ರ ಯದಲ್ಲಿ ಆಯೋಜಿಸಿದ್ದ ನೋವು ನಿವಾರಣೆ ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಇಂಗ್ಲಿಷ್ ಮೆಡಿಸನ್‌ಯಿಂದ ತಕ್ಷಣವೇ ಗುಣಮುಖರಾಗಬಹುದು ಆದರೆ ಆದರಿಂದ ಇತರೆ ಕಾಯಿಲೆಗಳು ಉಂಟಾಗುವ ಸಾಧ್ಯತೆ ಹೆಚ್ಚು ಆದರೆ ಆಯುರ್ವೇದ ಪದ್ಧತಿಯಲ್ಲಿ ರೋಗದ ಮೂಲವನ್ನು ಬೇರು ಸಹಿತ ಕಿತ್ತು ಹೊಗೆಯುವ ಶಕ್ತಿ ಇದೆ ಎಂದರು.

ಜಿಲ್ಲೆಯಲ್ಲಿ 43 ಆಯುರ್ವೇದ ಕೇಂದ್ರಗಳಿದ್ದು, ಹರಪನಹಳ್ಳಿ ತಾಲೂಕಿನಲ್ಲಿ ಕೇಂದ್ರ, ಒಳಗೊಂಡಂತೆ ತಾಲೂಕಿನ ಕಡಬಗೇರಿ, ಕುಂಚೂರು, ಹುಲಿಕಟ್ಟಿ ರಾಗಿ ಮಸಲವಾಡದಲ್ಲಿ ಉಪ ಕೇಂದ್ರಗಳಿವೆ ಸಾರ್ವಜನಿಕರು ಇದರ ಉಪಯೋಗ ಪಡೆದುಕೊಳ್ಳಬೇಕು ಎಂದರು.

ಆಯುರ್ವೇದ ಆಸ್ಪತ್ರೆಯ ತಾಲೂಕು ವೈದ್ಯಾಧಿಕಾರಿ ಡಾ.ಗೀತಾ ಮಾತನಾಡಿ ಸಾರ್ವಜನಿಕರಲ್ಲಿ ಆಯುರ್ವೇದ ಪದ್ಧತಿಯನ್ನು ಜಾಗೃತಿ ಮೂಡಿಸುವ ಸಲುವಾಗಿ ಸರ್ಕಾರ ಇಂತಹ ಶಿಬಿರಗಳನ್ನು ಏರ್ಪಡಿಸಿದೆ ನಮ್ಮ ತಾಲೂಕು ಆಯುರ್ವೇದ ಆಸ್ಪತ್ರೆಯಲ್ಲಿ ದೀರ್ಘಕಾಲದ ಕಾಯಿಲೆಗಳಾದ ಸೊಂಟ, ಕುತ್ತಿಗೆ, ಭುಜ, ಬೆನ್ನು ನೋವು, ಮಂಡಿ ನೋವು, ಸಂಧಿವಾತ ಮತ್ತು ನರ ರೋಗಗಳಿಗೆ ಉತ್ತಮ ಚಿಕಿತ್ಸೆ ದೊರೆಯುತ್ತದೆ ಸಾರ್ವಜನಿಕರು ಇವುಗಳ ಸೌಲಭ್ಯ ಪಡೆಯಿರಿ ಎಂದರು.

ಹಿರಿಯ ತಜ್ಞ ಡಾ.ಶಿವಕುಮಾರ್ ಮಾತನಾಡಿ ಆಯುರ್ವೇದ ಪದ್ಧತಿ ಬಗ್ಗೆ ಅಪಪ್ರಚಾರ ಹೆಚ್ಚಾಗುತ್ತಿವೆ, ಇದರ ಬಗ್ಗೆ ಜನರು ಕಿವಿಗೊಡಬಾರದು, ಇತ್ತೀಚಿಗೆ ಇಂಗ್ಲಿಷ್ ಔಷಧಿಗಳಿಗಿಂತ ಆಯುರ್ವೇದ ಔಷಧಿ ಬಗ್ಗೆ ಜನರು ಆಸಕ್ತಿ ತೋರಿಸುತ್ತಿದ್ದಾರೆ ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಬಸಪ್ಪ, ವಕೀಲ ಬಸವರಾಜ ಮಾತನಾಡಿದರು. ಕೊಟ್ರಯ್ಯ, ಡಾ.ಸವಿತಾ ಸೇರಿದಂತೆ ಆಯುರ್ವೇದ ಆಸ್ಪತ್ರೆ ಸಿಬ್ಬಂದಿ ಇದ್ದರು.

ಮೂತ್ರಪಿಂಡ ರಕ್ಷಣೆಗೆ ಪ್ರತಿಯೊಬ್ಬ ನಾಗರಿಕರು ಬದ್ಧರಾಗಿರಿ: ಡಾ. ಗಾಯಿತ್ರಿ

ಉದಯಕಾಲ ನ್ಯೂಸ್

ಕುರುಗೋಡು: ಇಂದಿನ ಆಧುನಿಕ ಒತ್ತಡ ಜೀವನದಲ್ಲಿ ಆರೋಗ್ಯದ ಕಡೆಗೆ ನಾಗರಿಕರು ಮಹತ್ವ ಕಡಿಮೆಯಾಗಿದೆ. ಆದ್ದರಿಂದ ಪ್ರತಿಯೊಬ್ಬ ನಾಗರಿಕರು ಆರೋಗ್ಯವಾಗಿ ಜೀವಿಸಬೇಕಾದರೆ ದೇಹದ ಮೂತ್ರಪಿಂಡಗಳ ರಕ್ಷಣೆ ಬಹಳ ಅಗತ್ಯವಾಗಿದೆ ಎಂದು ಕುರುಗೋಡು ಸಮುದಾಯ ಆರೋಗ್ಯಕೇಂದ್ರದ ದಂತ ವೈದ್ಯಾಧಿಕಾರಿ ಗಾಯಿತ್ರಿ ಹೇಳೀದರು.

ಪಟ್ಟಣದ ಸಮುದಾಯ ಆರೋಗ್ಯಕೇಂದ್ರದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಜಿಲ್ಲಾಡಳಿತ ಬಳ್ಳಾರಿ, ಜಿಪಂ ಬಳ್ಳಾರಿ, ಆರೋಗ್ಯ ಮತ್ತು ಕುಟುಂಬಕಲ್ಯಾಣ ಇಲಾಖೆ ಬಳ್ಳಾರಿ, ತಾಪಂ.ಕುರುಗೋಡು, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಕುರುಗೋಡು, ಡಿಸಿಡಿಸಿ.ಕಿಡ್ನಿಕೇರ್‌ಸೆಂಟರ್ ಕುರುಗೋಡು, ಮತ್ತು ಸಮುದಾಯ ಆರೋಗ್ಯಕೇಂದ್ರ ಕುರುಗೋಡು ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಮೂತ್ರಪಿಂಡಗಳ ಆರೋಗ್ಯ ದಿನಾಚರಣೆ'ಯಲ್ಲಿ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.



ಮನುಷ್ಯ ನಿತ್ಯ ಜೀವನದಲ್ಲಿ ಆರೋಗ್ಯದಿಂದ ಇರಬೇಕಾದರೆ ದೇಹದ ಅಂಗಾಂಗಳಾದ ಕಿಡ್ನಿ, ಕಣ್ಣು, ಕಿವಿ, ಮೂಗು, ತಲೆ ಸೇರಿದಂತೆ ಇತರೆ ಅಂಗಾಂಗಳನ್ನು ರಕ್ಷಣೆ ಮಾಡಿಕೊಳ್ಳಲು ಗಮನಹರಿಸಬೇಕು.

ದೇಹದ ಒಂದು ಅಂಗ ಫೇಲ್‌ಆದರೂ ಜೀವಿಸುವುದಕ್ಕೆ ಕಷ್ಟವಾಗುತ್ತಿದೆ. ಆದ್ದರಿಂದ ಎಲ್ಲರೂ ಸಕಾಲಕ್ಕೆ ಊಟ, ತಿಂಡಿ, ವ್ಯಾಯಾಮ ಸೇರಿದಂತೆ ಇತರೆ ಕೆಲಸಗಳನ್ನು ಮಾಡಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಿರಿ ಎಂದು ನುಡಿದರು.

ಸಮುದಾಯ ಆರೋಗ್ಯಕೇಂದ್ರದ ಮಕ್ಕಳ ತಜ್ಞರಾದ ರೋಹಿಣಿ ಮಾತನಾಡಿ, ಮನುಷ್ಯನಿಗೆ ಕಿಡ್ನಿ ಬಹಳ ಅತ್ಯಮೂಲ್ಯವಾದ ಅಂಗ. ಆ ಅಂಗವನ್ನು ಎಲ್ಲರೂ ರಕ್ಷಣೆಜೊತೆಗೆ ಪೋಷಣೆ ಕೂಡ ಅಷ್ಟೆ ಮುಖ್ಯ ಎಂದು ನುಡಿದರು.

ಸಮುದಾಯ ಆರೋಗ್ಯಕೇಂದ್ರದ ಆಯುಷ್ ವೈದ್ಯಾಧಿಕಾರಿ ರಂಗಸ್ವಾಮಿ, ಕೇಂದ್ರದ ಹಿರಿಯ ಪ್ರಯೋಗಶಾಲಾ ತಂತ್ರಜ್ಞ ಅಧಿಕಾರಿ ಶ್ರೀನಿವಾಸರೆಡ್ಡಿ, ಸಮುದಾಯ ಆರೋಗ್ಯಕೇಂದ್ರದ ವ್ಯವಸ್ಥಾಪಕ ಸಂತೋಷ್‌ಕುಮಾರ್, ಹಿರಿಯ ಔಷಧ ತಂತ್ರಜ್ಞಾಧಿಕಾರಿ ಶೇಷಗಿರಿದಾಸಿ, ಸ್ನೇಹಕ್ಲಿನಿಕ್ ಆಪ್ತಸಮಾಲೋಚಕ ಮಹಬೂಬ್‌ಬಾಷ, ಡಯಾಲಿಸಿಸ್ ಘಟಕದ ಲ್ಯಾಬ್ ತಂತ್ರಜ್ಞ ಅಧಿಕಾರಿ ಅಶ್ವಿನಿ ಎಂಎಚ್, ಅರುಣಕುಮಾರ್, ಜಾವಿದ್‌ಅಲಿ, ಸೇರಿದಂತೆ ಕುರುಗೋಡು ಸಮುದಾಯ ಆರೋಗ್ಯಕೇಂದ್ರದ ಎಲ್ಲಾ ಸಿಬ್ಬಂದಿ ಇದ್ದರು.

ದೈವತ್ವ ಅಳವಡಿಸಿಕೊಂಡಾಗ ನೆಮ್ಮದಿ, ಸೌಹಾರ್ದತೆ: ಶ್ರೀಮರಿ ಕೊಟ್ಟೂರು ದೇವರು



ಉದಯಕಾಲ ನ್ಯೂಸ್

ಕಂಪ್ಲಿ: ಭಾರತವು ಧರ್ಮ, ದೇವರು ಹಾಗೂ ದೈವತ್ವವನ್ನು ಜೀವನದ ಅಂಗವಾಗಿ ಅಳವಡಿಸಿಕೊಂಡು ಬಂದ ದೇಶವಾಗಿದ್ದು, ಆದರಿಂದಲೇ ಸಮಾಜದಲ್ಲಿ ಶಾಂತಿ, ನೆಮ್ಮದಿ ಹಾಗೂ ಸೌಹಾರ್ದತೆಯ ಜೀವನ ನಡೆಸಲು ಸಾಧ್ಯವಾಗಿದೆ ಎಂದು ಶ್ರೀಧರಗಡ್ಡೆಯ ಜಗದ್ಗುರು ಕೊಟ್ಟೂರುಸ್ವಾಮಿ ಶಾಖಾ ವಿರಕ್ತಮಠದ ಶ್ರೀಮರಿ ಕೊಟ್ಟೂರು ದೇವರು ಹೇಳಿದರು.

ಪಟ್ಟಣದ ಸಾಂಗತ್ರಯ ಸಂಸ್ಕೃತ ಪಾಠಶಾಲೆಯಲ್ಲಿ ವೀರಶೈವ ಲಿಂಗಾಯತ ಸಮಾಜದಿಂದ ಹಮ್ಮಿಕೊಂಡಿದ್ದ ರೇಣುಕಾಚಾರ್ಯರ ಜಯಂತ್ಯುತ್ಸವದ ಅಂಗವಾಗಿ ನಡೆದ ಧರ್ಮಸಭೆಗೆ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಲ್ಯಾಣಚೌಕಿ ಮಠದ ಬಸವರಾಜಶಾಸ್ತ್ರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಯಂತ್ಯುತ್ಸವದ ಅಂಗವಾಗಿ ಶ್ರೀರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಧರ್ಮಸಭೆಯಲ್ಲಿ ವೀರಶೈವ ಲಿಂಗಾಯತ ಸಮಾಜದ ಮುಖಂಡರು ಹಾಗೂ ಭಕ್ತರು ಭಾಗವಹಿಸಿ ಮಹಾನ್ ಸಂತರ ತತ್ವಗಳನ್ನು ಸ್ಮರಿಸಿದರು. ವೀರಶೈವ ಸಮಾಜದ ಪ್ರಮುಖರಾದ ಕೆ.ಎಂ. ಹೇಮಯ್ಯಸ್ವಾಮಿ, ಅರವಿ ಬಸವನಗೌಡ, ಪಿ. ಮೂಕಯ್ಯಸ್ವಾಮಿ, ವಾಲಿ ಕೊಟ್ರಪ್ಪ, ಎಸ್.ಎಂ. ನಾಗರಾಜ, ಎಸ್.ಎಸ್.ಎಂ. ಚನ್ನಬಸವರಾಜ, ಡಾ. ಶಾರದಾ ಜ. ಹಿರೇಮಠ, ಇಟಗಿ ಬಸವರಾಜಗೌಡ, ಕೆ.ಎಂ. ಬಸವರಾಜಶಾಸ್ತ್ರಿ, ಘನಮಠದಯ್ಯ ಹಿರೇಮಠ, ಕೆ.ಎಂ. ವಾಗೀಶ, ವಿ. ವಿದ್ಯಾಧರ, ಎಲಿಗಾರ ವೆಂಕಟರೆಡ್ಡಿ, ಎಸ್.ಡಿ. ಬಸವರಾಜ, ಯು.ಎಂ. ವಿದ್ಯಾಶಂಕರ, ಅಕ್ಕಮಹಾದೇವಿ ಮಹಿಳಾ ಮಂಡಳಿ ಸದಸ್ಯೆಯರು ಹಾಗೂ ವೀರಶೈವ ಸಮುದಾಯದವರು ಉಪಸ್ಥಿತರಿದ್ದರು.ಹಲವರು ಉಪಸ್ಥಿತರಿದ್ದರು.

ಕಿಡಿಗೇಡಿಗಳಿಂದ ಬೈಕ್‌ಗೆ ಬೆಂಕಿ: ದೂರು ದಾಖಲು

ಉದಯಕಾಲ ನ್ಯೂಸ್



ಹರಪನಹಳ್ಳಿ: ಮನೆ ಮುಂದೆ ನಿಲ್ಲಿಸಿದ್ದ ಬೈಕ್‌ಗೆ ಯಾರೋ ಕಿಡಿಗೇಡಿಗಳು ಬೆಂಕಿ ಹಚ್ಚಿ ಹೋಗಿರುವ ಘಟನೆ ತಾಲೂಕಿನ ಅಲಮರಸಿಕೇರಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಮುದೇನೂರು ಹೊನ್ನಪ್ಪ ಎಂಬುವವರಿಗೆ ಸೇರಿದ ಬೈಕ್(ಸ್ಕೂಟರ್)ಗೆ ಕಳೆದ ಮಧ್ಯರಾತ್ರಿ ಕಿಡಿಗೇಡಿಗಳು ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿ ಹೋಗಿದ್ದು ಸ್ಕೂಟರ್ ಭಾಗಶಃ ಸುಟ್ಟು ಹೋಗಿದೆ. ಈ ಸಂಬಂಧ ಹರಪನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಹಿಳೆಯರು ಧೈರ್ಯದಿಂದ ಉಜ್ವಲ ಭವಿಷ್ಯ ರೂಪಿಸಿಕೊಳ್ಳಿ: ಡಾ. ಸಿ. ಭಾರತಿ

ಉದಯಕಾಲ ನ್ಯೂಸ್

ಬಳ್ಳಾರಿ: ಅಡುಗೆ ಮನೆಗೆ ಸೀಮಿತವಾಗಿದ್ದ ಮಹಿಳೆಯು ಇಂದು ಎಲ್ಲಾ ರಂಗದಲ್ಲಿಯೂ ಸಾಧನೆಯ ಮುನ್ನಡೆಯಿಂದ ತನ್ನ ಸಾಮರ್ಥ್ಯವನ್ನು ಸಾಬೀತು ಪಡಿಸಿದ್ದಾಳೆ. ಮಹಿಳೆಯರು ಆತ್ಮವಿಶ್ವಾಸ, ಧೈರ್ಯ ಮತ್ತು ತಾಳ್ಮೆಯಿಂದ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಮೋಕಾ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸಿ. ಭಾರತಿ ಅಭಿಪ್ರಾಯಪಟ್ಟರು.

ಮೋಕಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ ಮತ್ತು ಮಹಿಳಾ ಸಬಲೀಕರಣ ಕೋಶದಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಮೋಕಾದ ಘನ ಮತ್ತು ದ್ರವ ತ್ಯಾಜ್ಯ ವಾಹನ ಚಾಲಕಿ ಕೆ.ಎ. ಕವಿತ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಸರೋಜಾ ಅಧ್ಯಕ್ಷತೆ ವಹಿಸಿದ್ದರು.

ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಚಾಲಕರಾದ ಡಾ. ಬಿ.ಜಿ.ಕಲಾವತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕನ್ನಡ ಅಧ್ಯಾಪಕ ಡಾ.ಸೋಮಶೇಖರ ಮಹಿಳಾ ದಿನಾಚರಣೆ ಕುರಿತು ಮಾತನಾಡಿದರು. ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಕವಿತ ಕೆ.ಎ.(ಘನ ಮತ್ತು ದ್ರವ ತ್ಯಾಜ್ಯ ವಾಹನ ಚಾಲಕಿ)ಡಾ.ಸಿ. ಭಾರತಿ (ಆಡಳಿತ ವೈದ್ಯಾಧಿಕಾರಿ,ಸಮುದಾಯ ಆರೋಗ್ಯ ಕೇಂದ್ರ) ಉಮೇರ .ವಿ.(ಕಿರಿಯ ಅಭಿಯಂತರರು, ಕೆ.ಪಿ.ಟಿ.ಸಿ.ಎಲ್) ಹೊಳಗುಂದಿ ಶೃತಿ (ಮಹಿಳಾ ಪೊಲೀಸ್ ಪೇದೆ)ಪಾರ್ವತಿ (ಅಧ್ಯಕ್ಷರು, ಮುದಿ ಮಲ್ಲೇಶ್ವರ ಸಂಜೀವಿನಿ,ಗ್ರಾಮಪಂಚಾಯತಿ,ಮೋಕಾ)ಲಲಿತ (ಗ್ರಂಥ ಪಾಲಕರು) ಇವರನ್ನು ಕಾಲೇಜಿನಿಂದ ಸನ್ಮಾನಿಸಲಾಯಿತು. ವಿದ್ಯಾರ್ಥಿನಿಯರಾದ ಶ್ವೇತಾ,ಪೂಜಿತಾ ಹಾಗೂ ಸಂಗಡಿಗರು ಪ್ರಾರ್ಥಿಸಿ,ನಿರೂಪಿಸಿದರು. ಕಾಲೇಜು ಅಧ್ಯಾಪಕರು ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

Chola
Enter a better life
ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಕಂಪನಿ ಲಿಮಿಟೆಡ್
ಕಾರ್ಪೊರೇಟ್ ಕಚೇರಿ: ಚೋಳಾ ಕ್ರೆಸ್ಟ್, ಸಿ 54 & 55, ಸೂಪರ್ ಬಿ –4, ತಿರು ವಿ ಕಾ ಇಂಡಸ್ಟ್ರಿಯಲ್ ಎಸ್ಟೇಟ್, ಗಿಂಡಿ, ಚೆನ್ನೈ– 600 032, ಟಿ.ಎನ್.
ಇ-ಹರಾಜು ಮಾರಾಟ ಸೂಚನೆ (ಇ-ಬಿಡ್ಡಿಂಗ್ ಮೂಲಕ ಮಾತ್ರ ಮಾರಾಟ)
2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6) ಮತ್ತು 9(1) ರ ಅಡಿಯಲ್ಲಿ ...
[illegible]
https://www.cholamandalam.com & www.auctionfocus.in
[illegible]
ದಿನಾಂಕ: 12.03.2026
ಸ್ಥಳ: [illegible]
ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಕಂಪನಿ ಲಿಮಿಟೆಡ್

Chola
Enter a better life
ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಕಂಪನಿ ಲಿಮಿಟೆಡ್
ಕಾರ್ಪೊರೇಟ್ ಕಚೇರಿ: ಚೋಳಾ ಕ್ರೆಸ್ಟ್, ಸಿ 54 & 55, ಸೂಪರ್ ಬಿ –4, ತಿರು ವಿ ಕಾ ಇಂಡಸ್ಟ್ರಿಯಲ್ ಎಸ್ಟೇಟ್, ಗಿಂಡಿ, ಚೆನ್ನೈ– 600 032, ಟಿ.ಎನ್.
ಇ-ಹರಾಜು ಮಾರಾಟ ಸೂಚನೆ (ಇ-ಬಿಡ್ಡಿಂಗ್ ಮೂಲಕ ಮಾತ್ರ ಮಾರಾಟ)
[illegible]
ದಿನಾಂಕ: 12.03.2026
ಸ್ಥಳ: [illegible]
ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಕಂಪನಿ ಲಿಮಿಟೆಡ್

सेन्ट्रल बैंक ऑफ़ इंडिया
Central Bank of India
CENTRAL TO YOU SINCE 1911
ಪ್ರಾದೇಶಿಕ ಕಚೇರಿ : 14/15, ವೆರೈಟಿ ಹಾಲ್ ರಸ್ತೆ, ಕೊಯಮುತ್ತೂರು–641 001.

ಬೃಹತ್ ಇ-ಹರಾಜು ಮಾರಾಟ ಸೂಚನೆ (ಸರ್ಫೇಸಿ ಕಾಯಿದೆ 2002ರ ಅಡಿ)

ಕೆಳಸಹಿದಾರರು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ ಇದರ ಅಧಿಕೃತ ಅಧಿಕಾರಿಯಾಗಿ, ಈ ಕೆಳಗೆ ವಿವರಿಸಿರುವ ಆಸ್ತಿಗಳನ್ನು ಈ ಕೆಳಗೆ ವಿವರಿಸಿದ ದಿನಾಂಕದಂದು ಸೆಕ್ಷನ್ 13(4) ರ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿ ಸ್ವಾಧೀನಪಡಿಸಿಕೊಂಡಿದ್ದು, ಈ ಕೆಳಗಿನ ದಿನಾಂಕದ ತಗಾದೆ ಸೂಚನೆಗೆ ಸಂಬಂಧಿಸಿದಂತೆ ಸೆಕ್ಷನ್ 13(2) ರ ಹೇಳಲಾದ ಕಾಯಿದೆಯಂತೆ ಈ ಕೆಳಗಿನ ಖಾತೆಗಳಿಂದ ಸಾಲಗಾರ/ಜಾಮೀನುದಾರ/ಅಡಮಾನದಾರ ಇವರುಗಳಿಂದ ಬರಬೇಕಾದ ಬಾಕಿ ಮೊತ್ತ ಮತ್ತು ಬಡ್ಡಿಯ ವಸೂಲಿಗಾಗಿ ಮಾರಾಟಈ ಕೆಳಗೆ ವಿವರಿಸಿದಂತೆ ಮಾಡಲಿರುವರು. ಸಾಲಗಾರ/ಜಾಮಿನುದಾರ/ಅಡಮಾನದಾರ ಇವರುಗಳಿಂಥ ಹಣ ಮರುಪಾವತಿ ಅನಿಯಮಿತವಾಗಿರುವುದರಿಂದ ಕೆಳಸಹಿದಾರರು ಸೆಕ್ಷನ್ 13(4) (ಎ)ರ ಹೇಳಲಾದ ಕಾಯಿದೆಯಂತೆ ನಿಯಮ 8 ಮತ್ತು 9ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ ಬ್ಯಾಂಕಿಗೆ ಬರಬೇಕಾದ ಬಾಕಿಯನ್ನು ಆಸ್ತಿಯ ಮಾರಾಟದ ಮೂಲಕ ವಸೂಲು ಮಾಡಿಕೊಳ್ಳಲಿರುವರು. ಮಾರಾಟವು ಕೆಳಸಹಿದಾರರ ಮೂಲಕ ಇ-ಹರಾಜು ವೇದಿಕೆಯಲ್ಲಿ ವೆಬ್‌ಸೈಟ್ https://baanknet.com ಮೂಲಕ ನಡೆಯಲಿದೆ.

ಶಾಖೆ : ಹೊಸೂರು ಶಾಖೆ. ಸಾಲದ ಖಾತೆಯ ಹೆಸರು: ಸಾಲಗಾರರು : ಮೆ॥ ಲಲಿತ್ ಶಾಂತ್ ಆಟೋ ಕಾಂಪೋನೆಂಟ್ಸ್ ಮಾಲೀಕರು: ಶ್ರೀ ಲಲಿತ ಶಾಂತೇಶ್ ಉಕ್ಕಲಿ, ನೋಂದಾಯಿತ ಮತ್ತು ಫ್ಯಾಕ್ಟರಿ ವಿಳಾಸ : ಖಾತಾ ನಂ. 1 ಮತ್ತು 2, ಸರ್ವೆ ನಂ. 650/ಬಿ, ಕೊತಗೊಂಡಪಲ್ಲಿ ಗ್ರಾಮ, ಹೊಸೂರು–635109. ಮಾಲೀಕರ ವಾಸದ ವಿಳಾಸ: ಶ್ರೀಮತಿ ಲಲಿತಾಂಬಿಕಾ ಶಾಂತೇಶ್ ಉಕ್ಕಲಿ ಅಲಿಯಾಸ್ ಶ್ರೀಮತಿ ಲಲಿತಾ ಶಾಂತೇಶ್ ಉಕ್ಕಲಿ, ಆರ್ ಹೆಚ್ ನಂ. ಎಫ್–1 ದಾಶ್‌ಮೇಶ್ ವಿಹಾರ್ ಕೊ–ಆಪರೇಟಿವ್ ಹೌಸಿಂಗ್ ಸೊಸೈಟಿ, ಶಾಹ್‌ನೂರ್ಮಿಯ ದರ್ಗಾ ಶಹಾನೂರ್‌ವಾಡಿ ಔರಂಗಾಬಾದ್ ಮಹಾರಾಷ್ಟ್ರ–431001. ಜಾಮೀನುದಾರ : ಶ್ರೀ ಶಾಂತೇಶ್ ರಾಮಚಂದ್ರ ಉಕ್ಕಲಿ, ಆರ್ ಹೆಚ್ ನಂ. ಎಫ್–1 ದಾಶ್‌ಮೇಶ್ ವಿಹಾರ್ ಕೊ–ಆಪರೇಟಿವ್ ಹೌಸಿಂಗ್ ಸೊಸೈಟಿ, ಶಾಹ್‌ನೂರ್ಮಿಯ ದರ್ಗಾ ಶಹಾನೂರ್‌ವಾಡಿ ಔರಂಗಾಬಾದ್ ಮಹಾರಾಷ್ಟ್ರ–431001. ಬಾಕಿ ಮೊತ್ತ: 11.03.2026 ರಂತೆ ರೂ.4,38,59,256.00 ಮತ್ತು ಬಡ್ಡಿ ಮತ್ತು ಇತರೆ ವೆಚ್ಚಗಳು. ತಗಾದೆ ಸೂಚನೆ ದಿನಾಂಕ : 01.10.2021, ಭೌತಿಕ ಸ್ವಾಧೀನತೆ ದಿನಾಂಕ : 16.02.2022. ಸ್ಥಿರ ಆಸ್ತಿಯ ವಿವರ: (1) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 02 ವಿಸ್ತೀರ್ಣ 2 ಗುಂಟೆ 6 ಆನಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ. 3, ಪಶ್ಚಿಮಕ್ಕೆ: ಪ್ಲಾಟ್ ನಂ. 1, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಪ್ಲಾಟ್ ನಂ. 15. ಮೀಸಲು ಬೆಲೆ : ರೂ.71,77,000/– ಇಎಂಡಿ : ರೂ7,17,700/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/.

2) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 245, ವಿಸ್ತೀರ್ಣ 1 ಗುಂಟೆ 5.25 ಆನಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 234, ಉತ್ತರಕ್ಕೆ: ಪ್ಲಾಟ್ ನಂ. 246, ದಕ್ಷಿಣಕ್ಕೆ: ಪ್ಲಾಟ್ ನಂ. 244. ಮೀಸಲು ಬೆಲೆ : ರೂ.40,13,500/– ಇಎಂಡಿ : ರೂ.4,01,350/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/.

3) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 246, ವಿಸ್ತೀರ್ಣ 1 ಗುಂಟೆ 5.25ಆನಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿ ಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 233, ಉತ್ತರಕ್ಕೆ: ಪ್ಲಾಟ್ ನಂ. 247, ದಕ್ಷಿಣಕ್ಕೆ: ಪ್ಲಾಟ್ ನಂ. 245.. ಮೀಸಲು ಬೆಲೆ : ರೂ.40,13,500/– ಇಎಂಡಿ : ರೂ.4,01,350/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/.

4) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 252, ವಿಸ್ತೀರ್ಣ 1 ಗುಂಟೆ 5.25 ಆಣಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 227, ಉತ್ತರಕ್ಕೆ: ಪ್ಲಾಟ್ ನಂ. 253, ದಕ್ಷಿಣಕ್ಕೆ: ಪ್ಲಾಟ್ ನಂ. 251. ಮೀಸಲು ಬೆಲೆ : ರೂ.40,13,500/– ಇಎಂಡಿ : ರೂ.4,01,350/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/.

5) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 253, ವಿಸ್ತೀರ್ಣ 1 ಗುಂಟೆ 12.5 ಆನಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 226, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ : ಪ್ಲಾಟ್ ನಂ. 252. ಮೀಸಲು ಬೆಲೆ : ರೂ.53,82,500/– ಇಎಂಡಿ : ರೂ.5,38,250/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/–

ಹರಾಜಿನ ದಿನಾಂಕ : 30.03.2026, ಹರಾಜಿನ ಸಮಯ: ಬೆಳಗ್ಗೆ 11.00 ರಿಂದ ಸಂಜೆ 4.00 ಗಂಟೆ. ಜೊತೆಗೆ 10 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ. ಆಸ್ತಿ ಪರಿವೀಕ್ಷಣೆ ದಿನಾಂಕ: 23.03,2026ರಿಂದ 27.03.2026ರ ನಡುವೆ ಬೆಳಗ್ಗೆ 10.00 ರಿಂದ 04.00ರ ನಡುವೆ ಎಲ್ಲಾ ಕೆಲಸದ ದಿನದಂದು ಶಾಖಾ ವ್ಯವಸ್ಥಾಪಕರ ಪೂರ್ವಾನುಮತಿ ಪಡೆದು. ಇಎಂಡಿ ಪಾವತಿಗೆ ಕೊನೆ ದಿನಾಂಕ : 30.03.2026 ಮಧ್ಯಾಹ್ನ 1.00 ಗಂಟೆಯವರೆಗೆ. ಅಧಿಕೃತ ಅಧಿಕಾರಿ ಮೊಬೈಲ್ ಸಂ. 8489903009/ಮುಖ್ಯ ವ್ಯವಸ್ಥಾಪಕರು (ಆರ್‌ಒ), ಮೊಬೈಲ್ ಸಂ. 8489903057.

ನಿಯಮ ಮತ್ತು ನಿಬಂಧನೆಗಳು : 1. ಹರಾಜು ಆನ್‌ಲೈನ್ ಬಿಡ್ಡಿಂಗ್ ಮೂಲಕ ವೆಬ್‌ಸೈಟ್ https://baanknet.com ಯಲ್ಲಿ ಈ ಮೇಲೆ ತಿಳಿಸಿರುವ ಸಮಯ ಮತ್ತು ದಿನಾಂಕದಿಂದ (ಮಾರಾಟ ಮುಗಿಯುವವರೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ) ನಡೆಯಲಿದೆ. 2. ಬಿಡ್ ಗಳನ್ನು ಆನ್‌ಲೈನ್ ಮೂಲಕ 30.03.2026ರಂದು ಮಧ್ಯಾಹ್ನ 1.00ಗಂಟೆಯವರೆಗೆ ಸಲ್ಲಿಸಬಹುದು. 3, ಇ-ಹರಾಜು ಮಾರಾಟವು "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ". "ಯಾವುದು ಇದೆಯೋ ಹಾಗೆ" ಆಧಾರದ ಮೇಲೆ ಮಾರಾಟ ನಡೆಸಲಾಗುವುದು. 4. ಉದ್ದೇಶಿತ ಬಿಡ್ಡುದಾರರು ವೆಬ್ ಸೈಟ್ https://baanknet.comಗೆ ಬೇಟಿ ನಿಡಿ ಬಿಡ್ ಸಲ್ಲಿಸುವ ಮೊದಲು ನಿಯಮ ಮತ್ತು ನಿಬಂಧನೆಗಳನ್ನು ಪರಿಶೀಲಿಸಿ ಆನಂತರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಲಾಗಿದೆ. 5. ಯಶಸ್ವಿ ಬಿಡ್ಡುದಾರರು ಆಸ್ತಿಯ ಮೌಲ್ಯ ರೂ.50.00 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನದಾಗಿದ್ದರೆ, ಶೇ 1 ನ್ನು ಮಾರಾಟ ಮೌಲ್ಯವಾಗಿ ಟಿಡಿಎಸ್ ಪಾವತಿ ಮಾಡಬೇಕು.ಆದಾಯ ತೆರಿಗೆ ಇಲಾಖೆ ಕಾಯಿದೆ 1941ಎ ರ ಅನ್ವಯ ನಮೂನೆ 26 ಕ್ಯುಬಿ ರ ಆದಾಯ ತೆರಿಗೆ ಇಲಾಖೆ ಕಾಯಿದೆಯ ಚಲನ್ ಮತ್ತು ಮೂಲ ರಸೀದಿಯನ್ನು ಟಿಡಿಎಸ್ ಪ್ರಮಾಣಪತ್ರವನ್ನು ಬ್ಯಾಂಕ್ ಗೆ ಸಲ್ಲಿಸಬೇಕು. ಆಸ್ತಿ ಸಂಬಂಧಿತ ವಿಚಾರಣೆಗಾಗಿ ಸಂಪರ್ಕಿಸಿ: ಅಧಿಕೃತ ಅಧಿಕಾರಿ: ಮೊಬೈಲ್ ಸಂ. 8489903009/ಮುಖ್ಯ ವ್ಯವಸ್ಥಾಪಕರು (ಆರ್ ಒ)–ಮೊಬೈಲ್ ಸಂಖ್ಯೆ: 8489903057, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ ಪ್ರಾದೇಶಿಕ ಕಚೇರಿ, ಕೊಯಮುತ್ತೂರು ಇ-ಮೇಲ್ : bmcoim2071@centralbank.co.in/recvcoimro@centralbank.co.in ಇವರನ್ನು ಕೆಲಸದ ದಿನದಂದು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮತ್ತು ವೆಬ್ ಪೋರ್ಟಲ್ ನಲ್ಲಿ ಬಿಡ್ ದಾರರು ನೊಂದಾಯಿಸಿದ ನಂತರ ಉದ್ದೇಶಿತ ಬಿಡ್ಡುದಾರರು ಈ ಕೆಳಗಿನ ದಾಖಲೆಗಳನ್ನು ಬಿಡ್ ಸಲ್ಲಿಕೆಯ ಕೊನೆ ದಿನಾಂಕದ ಮೊದಲು ಸಲ್ಲಿಸಬೇಕು. 1) ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಚಲನ್, 2. ಪ್ಯಾನ್ ಕಾರ್ಡ್ ಪ್ರತಿ, 3. ಗುರುತಿನ ಚೀಟಿ ಅಂದರೆ ಸ್ವಯಂ ದೃಢೀಕೃತ ವೋಟರ್ ಐಡಿ / ಚಾಲನಾ ಪರವಾನಿಗೆ/ಪಾಸ್‌ಪೋರ್ಟ್ ಇತ್ಯಾದಿ ಪ್ರತಿ. 4. ವಿಳಾಸ ಪುರಾವೆ ಪ್ರತಿ ಇವುಗಳನ್ನು ಲಗತ್ತಿಸಬೇಕು ಇವುಗಳು ಇಲ್ಲವಾದರೆ ಬಿಡ್‌ಗಳನ್ನು ತಿರಸ್ಕರಿಸಲಾಗುವುದು

ಸ್ಥಳ: ಹೊಸೂರು
ದಿನಾಂಕ: 11.03.2026
ಅಧಿಕೃತ ಅಧಿಕಾರಿ
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ